4. ಸೊಳ್ಳೆ ನಿಯಂತ್ರಣ ಕ್ರಮಗಳಾದ ಸ್ಪ್ರೇಯಿಂಗ್ ಮತ್ತು Anti Larval Operation ಕಾರ್ಯವನ್ನು ಪಾಲಿಕೆ ವ್ಯಾಪ್ತಿಯಲ್ಲಿ ಬರುವ Storm Water drains ಚರಂಡಿಗಳಲ್ಲಿ ಸೊಳ್ಳೆ ಸಾಂದ್ರತೆ ಹೆಚ್ಚಾಗದಂತೆ ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳಲಾಗುತ್ತದೆ.
5. IEC ಅಡಿಯಲ್ಲಿ ಪ್ರಮುಖ ನಿಯತಕಾಲಿಕೆಗಳಲ್ಲಿ ಸೊಳ್ಳೆ ನಿಯಂತ್ರಣ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಿ ಪಾಲಿಕೆ ವ್ಯಾಪ್ತಿಯ ಸಮಸ್ಯೆಗಳಿಗೆ ಪರಿಹಾರ ಹಾಗೂ ಸೂಕ್ತ ಮಾಹಿತಿ, ನಿರ್ವಹಣೆಗಳನ್ನು ನೀಡಲಾಗುತ್ತದೆ.
6. ಆರೋಗ್ಯಾಧಿಕಾರಿಗಳು ಮುಂಗಡ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಯಾ ವಲಯ ಆರೋಗ್ಯಾಧಿಕಾರಿಗಳ ಮುಖಾಂತರ ಫಾಗಿಂಗ್ ಕಾರ್ಯಕ್ರಮವನ್ನು ಮಾಡಿಸಲಾಗುತ್ತಿದೆ.

ಆ)

ವರ್ಷಗಳು	ವೆಚ್ಚ ಮಾಡಿರುವ ಮೊತ್ತ ರೂ.ಗಳಲ್ಲಿ
2005	19,21,922.00
2006	51,00,423.00
2007	83,14,058.00
2008	93,96,583.00
2009	1,10,43,811.00

864 ಶ್ರೀ ರುದ್ರೇಶಗೌಡ ವೈ.ಎನ್ (ಬೇಲೂರು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿಯಲ್ಲಿ ಹೇಮಾವತಿ ನದಿಯಲ್ಲಿ ಮರಳು ತೆಗೆಯುತ್ತಿರುವುದು ನಿಜವೇ;

ಆ) ಯಾವ ಯಾವ ಹಳ್ಳಿಗಳಲ್ಲಿ ಮರಳು ತೆಗೆಯಲು ಅನುಮತಿ ನೀಡಲಾಗಿದೆ;

ಇ) ಒಂದೇ ಹೊಳೆಯಲ್ಲಿ 2 ಕಿ.ಮೀ ಅಂತರದಲ್ಲಿ 6 ಸ್ಥಳಗಳಲ್ಲಿ ಮರಳು ತೆಗೆಯಲು ಅನುಮತಿ (ಹರಾಜು ಮೂಲಕ) ನೀಡಲಾಗಿದೆಯೇ;

ಈ) ಅನುಮತಿ ನೀಡಲಾದ ಪ್ರದೇಶವನ್ನು ಹೊರತುಪಡಿಸಿ ಹೆಚ್ಚುವರಿ ಜಾಗದಲ್ಲಿ ಮರಳು ತೆಗೆದಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಉ) ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಊ) ಮರಳು ಸಾಗಾಣಿಕೆ ವಾಹನಗಳ ಓಡಾಟದಿಂದ ಅರೇಹಳ್ಳಿ ಹೋಬಳಿ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಈ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿಯ ನಾರ್ವೆ, ಗೊರವನಹಳ್ಳಿ ತುಂಬು ದೇವನಹಳ್ಳಿ ಮತ್ತು ಸುಲಗಳಲೆ ಗ್ರಾಮಗಳ 5 ಪ್ರದೇಶಗಳಲ್ಲಿ ಮರಳು ತೆಗೆಯಲು ಅನುಮತಿ ನೀಡಲಾಗಿದೆ.

ಇ) ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ, ಹೇಮಾವತಿ ನದಿ ಪಾತ್ರದಲ್ಲಿ ಸುಮಾರು 6 ಕಿ.ಮೀಟರ್‌ಗೂ ಹೆಚ್ಚಿನ ಅಂತರದಲ್ಲಿ ಮರಳು ನಿಕ್ಷೇಪವಿದ್ದ ಒಟ್ಟು 5 ಪ್ರದೇಶಗಳಲ್ಲಿ ಹರಾಜು ಮೂಲಕ ಮರಳು ಗಣಿ ಗುತ್ತಿಗೆಗಳನ್ನು ನೀಡಲಾಗಿದೆ.

ಈ) ಹೌದು.

ಉ) ಬೇಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ಅನುಮತಿ ನೀಡಲಾದ ಪ್ರದೇಶವನ್ನು ಹೊರತುಪಡಿಸಿ 4 ಕಡೆ ಮರಳು ತೆಗೆದಿರುವುದನ್ನು ಪತ್ತೆ ಹಚ್ಚಿ ಗುತ್ತಿಗೆದಾರರಿಂದ ರೂ.8,62,000–00ಗಳ ದಂಡ ವಸೂಲಿ ಮಾಡಲಾಗಿದೆ ಹಾಗೂ ಆಗಾಗ್ಗೆ ಸ್ಥಳ ತನಿಖೆ ಮಾಡಿ ಹೆಚ್ಚುವರಿ ಪ್ರದೇಶದಲ್ಲಿ ಮರಳು ತೆಗೆಯುವುದನ್ನು ತಡೆಗಟ್ಟಲು ಅವಶ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಊ) ಅರೇಹಳ್ಳಿ ಹೋಬಳಿಯ ಮುಖ್ಯ ರಸ್ತೆಗಳು ಡಾಂಬರ್ ರಸ್ತೆಗಳಾಗಿದ್ದು, ಹಾನಿಯಾಗಿರುವುದು ಕಂಡುಬಂದಿರುವುದಿಲ್ಲ. ಆದರೆ ನದಿ ಪಾತ್ರದಿಂದ ಮುಕ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಕಚ್ಚಾ ರಸ್ತೆಗಳು ಅಲ್ಲಲ್ಲಿ ಹಾಳಾಗಿರುವುದು ಕಂಡುಬಂದಿರುತ್ತದೆ.

ಋ) ಈ ರಸ್ತೆಗಳ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಪಂಚಾಯತಿ ವತಿಯಿಂದ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಮರಳು ಹರಾಜಿನ ಮೊತ್ತದ ಶೇಕಡ 50 ರಷ್ಟು ಹಣವನ್ನು ಸ್ಥಳೀಯ ಗ್ರಾಮ

ಪಂಚಾಯಿತಿಗಳಿಗೆ ನೀಡಲಾಗುತ್ತಿದ್ದು, ಅದರಲ್ಲಿ ರಸ್ತೆ ಅಭಿವೃದ್ಧಿ ಕಾರ್ಯ ನಿರ್ವಹಿಸಬಹುದಾಗಿದೆ.

ಪ್ರವಾಸೋದ್ಯಮ ಅಭಿವೃದ್ಧಿ ಅನುದಾನ

866 ಶ್ರೀ ರುದ್ರೇಶಗೌಡ ವೈ.ಎನ್. : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರವಾಸೋದ್ಯಮ ಇಲಾಖೆಗೆ ವಿವಿಧ ಅಭಿವೃದ್ಧಿಗಾಗಿ 2008–09 ನೇ ಸಾಲಿನಲ್ಲಿ ಎಷ್ಟು ಅನುದಾನ ಮೀಸಲಾಗಿಡಲಾಗಿತ್ತು;

ಆ) ಈ ಪೈಕಿ ಖರ್ಚಾದ ಅನುದಾನ ಎಷ್ಟು;

ಇ) ಯಾವ ಯಾವ ಪ್ರವಾಸೋದ್ಯಮ ಕೇಂದ್ರಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? (ವಿವರ ನೀಡುವುದು);

ಈ) ಅನುದಾನ ಖರ್ಚಾಗದೇ ಇದ್ದಲ್ಲಿ, ಯಾವ ಕಾರಣಕ್ಕೆ ಖರ್ಚು ಮಾಡಿರುವುದಿಲ್ಲ. (ವಿವರ ನೀಡುವುದು)?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) 2008–09ನೇ ಸಾಲಿನಲ್ಲಿ ಒದಗಿಸಲಾಗಿದ್ದ ಒಟ್ಟು ಅನುದಾನ ರೂ.12292.14ಲಕ್ಷ.

An amount of Rs.12292.14 lakhs Budget was earmarked for the year 2008-09.

ಆ) ಈ ಪೈಕಿ ವೆಚ್ಚವಾದ ಒಟ್ಟು ಅನುದಾನ ರೂ.12173.90ಲಕ್ಷಗಳನ್ನು ಖರ್ಚು ಮಾಡಲಾಗಿದೆ.

An amount of Rs.12173.90lakhs has been spent during 2008-09.

ಇ)

1. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ರಸ್ತೆಗಳಲ್ಲಿ ಮಾರ್ಗಸೂಚಿ ಫಲಕಗಳನ್ನು ಹಾಕಲು ರೂ. 166.57 ಲಕ್ಷಗಳನ್ನು ವಿನಿಯೋಗಿಸಲಾಗಿದೆ.
2. ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಅಗಸ್ತ್ಯ ತೀರ್ಥದ ಬಳಿ ಮಾನವ ವಿಕಾಸ ಪಾರ್ಕ್‌ನ್ನು ಅಭಿವೃದ್ಧಿಪಡಿಸಲು